ಅಸಲು ದಾವಾ ಸಂಖ್ಯೆ - 124/2014
ಪಿಡಬ್ಲ್ಯೂ - 01
ದಿನಾಂಕಃ 16-10-2019
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು - ಶ್ರೀ ವಿ ಬಿ ಟಿ ವಕೀಲರಿಂದ.

ನನ್ನ ಹೆಸರಿಗೆ ಖಾತೆ ಆದ ನಂತರ ಹೇಮಪ್ಪ ಗುಂಜಳ ಇವರಿಗೆ 4 ಎಕರೆ ಜಮೀನನ್ನು 1997 ರಲ್ಲಿ ಮಾರಾಟಕ್ಕೆ ಕೊಟ್ಟಿದ್ದೇನೆ ಅಂದರೆ ಸರಿ. ನನ್ನ ಸಹೋದರ ಭೀಮಪ್ಪ ತನ್ನ ಪಾಲಿನ ಆಸ್ತಿಯನ್ನು ಮಾರಾಟ ಮಾಡಿಲ್ಲ ಅಂದರೆ ಸರಿ. ಭೀಮಪ್ಪ ಮರಣ ಹೊಂದಿದ ನಂತರ ಅವರ ಹಿಸ್ಸೆದ ಜಮೀನುಗಳಲ್ಲಿ ಅವರ ಮಕ್ಕಳ ಹೆಸರು ದಾಖಲಾಗಿವೆ ಅಂದರೆ ಸರಿಯಲ್ಲ. ನಾನು ನನ್ನ ಸಹಿಯನ್ನು ಬರವಣಿಗೆ ಮುಖಾಂತರ ಮಾಡುತ್ತೇನೆ. ನಮ್ಮ ಮನೆತನಕ್ಕೆ ಒಂದು ಮನೆ ಇದೆ. ಖುಲ್ಲಾ ಜಾಗೆ ಇಲ್ಲ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಅಂದರೆ ಸರಿ. ಭೀಮಪ್ಪ ಯಾವ ಮನೆಯಲ್ಲಿ ವಾಸವಾಗಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಒಂದೇ ಮನೆಯಲ್ಲಿ ತಾನು ಒಂದು ಭಾಗದಲ್ಲಿ ಮತ್ತು ಭೀಮಪ್ಪ ಒಂದು ಭಾಗದಲ್ಲಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.5 ರ ವಿರುದ್ಧ ಏನು ಪರಿಹಾರ ಕೋರಿ ದಾವೆ ದಾಖಲಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಹಣದ ಸಲುವಾಗಿ ದಾಖಲಿಸಿದ್ದೇವೆ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿಗೆ ನಾನು ಹೊಲವನ್ನು ಕೊಟ್ಟಿದ್ದೆ ಆದರೆ ಅವರು ಹಣವನ್ನು ಕೊಟ್ಟಿಲ್ಲ ಎಂದು ಈ ದಾವೆಯನ್ನು ದಾಖಲಿಸಿದ್ದೇನೆ. 5 ನೇ ಪ್ರತಿವಾದಿ ನನಗೆ 2 ಲಕ್ಷ ಹಣ ಕೊಡಬೇಕಿತ್ತು. 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ 5 ನೇ ಪ್ರತಿವಾದಿಯ ಜೊತೆ ವ್ಯವಹಾರ ನಡೆದಿತ್ತು. 5 ನೇ ಪ್ರತಿವಾದಿಯ ಜೊತೆ ಮಾಡಿಕೊಂಡ ವ್ಯವಹಾರದ ಇಸ್ವಿ ನನಗೆ ನೆನಪಿಲ್ಲ. ನಾನು 5 ನೇ ಪ್ರತಿವಾದಿಯೊಂದಿಗೆ ಸರ್ವೆ ನಂ.201/7 ಬಿ ಜಮೀನಿಗೆ ಸಂಬಂಧಪಟ್ಟಂತೆ ವ್ಯವಹಾರ ಮಾಡಿಕೊಂಡಿದ್ದೆ ಅಂದರೆ ಸರಿಯಲ್ಲ. ವ್ಯವಹಾರವನ್ನು ಸರ್ವೆ ನಂ.197 ಕ್ಕೆ ಸಂಬಂಧಪಟ್ಟಂತೆ ಮಾಡಿಕೊಂಡಿದ್ದೆ. ಸದರಿ ಸರ್ವೆ ನಂ.197 ಷಣ್ಮುಖಪ್ಪ ತಂದೆ ಭೀಮಪ್ಪ ತಳವಾರ ಇವರ ಹೆಸರಿನಲ್ಲಿ ಇದೆ. ಸದರಿ ಜಮೀನು ಷಣ್ಮುಖಪ್ಪನ ಹೆಸರಿನಲ್ಲಿರುವುದರಿಂದ ನಾನು ಯಾವುದೇ ವ್ಯವಹಾರ ಮಾಡಲು ಬರುವುದಿಲ್ಲ ಅಂದರೆ ಸರಿ.

5 ನೇ ಪ್ರತಿವಾದಿ ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ನಂ.22/2015 ನ್ನು ದಾಖಲಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆಯಲ್ಲಿ ವಕೀಲರ ಮುಖಾಂತರ ಹಾಜರಾಗಿದ್ದೆನೆ ಅಂದರೆ ಸರಿ. 5 ನೇ ಪ್ರತಿವಾದಿ ಸದರಿ ದಾವೆಯನ್ನು ಏಕೆ ದಾಖಲಿಸಿದ್ದಾರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ 5 ನೇ ಪ್ರತಿವಾದಿ ಏನು ಪರಿಹಾರ ಕೋರಿದ್ದಾರೆ ನನ್ನ ವಕೀಲರ ಮುಖಾಂತರ ನಾನು ಕೇಳಿ ತಿಳಿದುಕೊಂಡಿಲ್ಲ. 5 ನೇ ಪ್ರತಿವಾದಿ ದಾಖಲಿಸಿರುವ ದಾವಾದಲ್ಲಿ ನನಗೆ ಅವರಿಂದ ದುಡ್ಡು ಬರಬೇಕು ಎಂದು ತಕರಾರು ಸಲ್ಲಿಸಿದ್ದೇನೆ. ಅದನ್ನು ಹೊರತುಪಡಿಸಿ ತಕರಾರಿನಲ್ಲಿ ಬೇರೆ ಏನನ್ನು ಕೇಳಿಲ್ಲ. 5 ನೇ ಪ್ರತಿವಾದಿ ವ್ಯವಹಾರದ ಪ್ರಕಾರ ನನಗೆ ಹಣವನ್ನು ಕೊಡಲು ಈಗಲೂ ತಯಾರಿರುತ್ತಾರೆ ಎಂದು ಕೇಳಿದ

ಪ್ರಶ್ನೆಗೆ ಹಣ ಬೇಡ ಎಂದು ನುಡಿಯುತ್ತಾರೆ. ಏಕೆ ಹಣ ಬೇಡ ಎಂದು ಹೇಳುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಆಗಿನ ಮಾಗಣೆನೇ ಬೇರೆ ಇತ್ತು . ಈಗಿನ ಮಾಗಣೆ ಬೇರೆ ಇದೆ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿ ಜೊತೆ ಮಾಡಿಕೊಂಡ ವ್ಯವಹಾರವನ್ನು ರದ್ದುಪಡಿಸಬೇಕೆಂದು ಕೋರಿ ಯಾವುದೇ ದಾವೆಯನ್ನು ದಾಖಲಿಸಿಲ್ಲ ಅಂದರೆ ಸರಿ. ವ್ಯವಹಾರ ಮಾಡಿಕೊಂಡಾಗ ಮಧ್ಯ ಇದ್ದ ಮಧ್ಯಸ್ಥಿಕೆಗಾರರಾದ ನದಾಫ, ಪರಮೇಶಪ್ಪ, ಬಸಪ್ಪ ಮರಬಸಪ್ಪ ಗುಂಜಳ, ಈಗ ಅವರು ಮರಣ ಹೊಂದಿದ್ದಾರೆ. ವ್ಯವಹಾರವನ್ನು ಸದರಿ 3 ಜನರ ಸಮಕ್ಷಮ ಮಾಡಿಕೊಂಡಿದ್ದೆ ಎಂದು ತೋರಿಸಲು ನನ್ನ ಬಳಿ ಯಾವುದೇ ಕಾಗದ ಇಲ್ಲ. ದಿನಾಂಕಃ 02.04.2014 ರಂದು 4 ಎಕರೆ 4 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಷಣ್ಮುಖಪ್ಪ ತಳವಾರ, ರಮೇಶ ಬಿ ತಳವಾರ, ಕೆ ಪಿ ದೊಡ್ಡಮನಿ , ವೀರಬಸಪ್ಪ ಅರಳಿ, ಎಸ್ ಬಿ. ಕೋಳಿವಾಡ ಇವರ ಸಮಕ್ಷಮ ವ್ಯವಹಾರ ಮಾಡಿಕೊಂಡಿದ್ದೆ ಅಂದರೆ ಸರಿಯಲ್ಲ. ಸದರಿ ವ್ಯವಹಾರವನ್ನು ನಾನು ಮಾಡಿಕೊಂಡಿದ್ದ ವಿಷಯ ಗೊತ್ತಿದ್ದರೂ ನಾನು ಸಂಚಕಾರ ಎಂದು 3 ಲಕ್ಷದ 35 ಸಾವಿರ ರೂಪಾಯಿ ಮೇಲ್ಕಾಣಿಸಿದ ಸಾಕ್ಷಿದಾರರ ಸಮಕ್ಷಮ ಪಡೆದುಕೊಂಡಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ 2014 ರಲ್ಲಿ ನಾನೇ ಚಾಪಾ ಕಾಗದವನ್ನು ತಂದು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಈ ಹಿಂದೆ 5 ನೇ ಪ್ರತಿವಾದಿ ಜೊತೆ ಪ್ರತಿ ಎಕರೆಗೆ 2 ಲಕ್ಷದಂತೆ ಖರೀದಿ ವ್ಯವಹಾರ ಮಾಡಿಕೊಂಡಿದ್ದೇನೆ ಅಂದರೆ ಸರಿ. ಸದರಿ ವ್ಯವಹಾರದ ಕುರಿತು ದಾಖಲೆ ನನ್ನ ಬಳಿ ಇಲ್ಲ. 2014 ರಲ್ಲಿ ಖರೀದಿ ಕರಾರು ಪತ್ರವನ್ನು ಸವಣೂರಿನಲ್ಲಿ ನಾನೇ ಮಾಹಿತಿ ಕೊಟ್ಟು ಬರೆಸಿದ್ದೇನೆ ಅಂದರೆ ಸರಿಯಲ್ಲ. ಸರ್ವೆ ನಂ.201/7 ಬಿ ನೇದ್ದರ ಜಮೀನಿನ ಪೂರ್ವಕ್ಕೆ 5 ನೇ ಪ್ರತಿವಾದಿಗೆ ಆಸ್ತಿ ಇದೆ ಅಂದರೆ ಸರಿ. ಪಶ್ಚಿಮಕ್ಕೆ ಷಣ್ಮುಖಪ್ಪ ಭೀಮಪ್ಪ ತಳವಾರ ಇವರ ಜಮೀನು ಇದೆ ಅಂದರೆ ಸರಿ. ಉತ್ತರಕ್ಕೆ ನನ್ನದೇ ಇನ್ನೊಂದು ಜಮೀನು ಇದೆ ಅಂದರೆ ಸರಿ. ದಕ್ಷಿಣಕ್ಕೆ ರಮೇಶಪ್ಪ ಮತ್ತು ಷಣ್ಮುಖಪ್ಪ ಇವರ ಜಮೀನು ಇದೆ ಅಂದರೆ ಸರಿ. ಭೀಮಪ್ಪ ತಳವಾರ ಅವರು ಜೀವಂತ ಇದ್ದಾಗ ಅವರ ಹೆಸರಿಗೆ ಖಾತೆಯಾಗಿದ್ದವು ಅಂದರೆ ಸರಿ. 1978 ರಲ್ಲಿ ಖಾತೆಯಾಗಿದ್ದವು ಅಂದರೆ ಸರಿ. ನಾನು ಖರೀದಿ ಕರಾರು ಪತ್ರವನ್ನು ಭೀಮಪ್ಪನ ಮಕ್ಕಳ ಸಮಕ್ಷಮ ಮಾಡಿಕೊಂಡಿದ್ದೆ ಅಂದರೆ ಸರಿಯಲ್ಲ. ಸುಮಾರು 40 ವರ್ಷಗಳ ಹಿಂದೆ ನನ್ನ ಮತ್ತು ಭೀಮಪ್ಪನ ನಡುವೆ ವಾಟ್ನಿಯಾಗಿವೆ ಅಂದರೆ ಸರಿಯಲ್ಲ. ವಾಟ್ನಿ ಮಾಡಿಕೊಂಡಿರುವ ವಿಷಯ ನನಗೆ ಗೊತ್ತಿದ್ದರೂ 5 ನೇ ಪ್ರತಿವಾದಿಗೆ ಆಸ್ತಿಯನ್ನು ಖರೀದಿ ಕೊಡಬಾರದು ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಈ ವಾಟ್ನಿ ದಾವೆಯನ್ನು ಉದ್ದೇಶಪೂರ್ವಕವಾಗಿ ಸೃಷ್ಟಿ ಮಾಡಿ ಸುಳ್ಳು ದಾವೆಯನ್ನು ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

<u>ಪ್ರತಿವಾದಿ **-1** ರಿಂದ **4** ರ ಪರ ವಕೀಲರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

**ಓ. ಹೆ. ಕೆ. ಸರಿ ಅದೆ.**

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.